ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ____

ಪತ್ರಿಕೆಯ ಹೆಸರು : NAME OF THE NEWS PAPER: ____ ದಿನಾಂಕ : DATE : ____

## ಚೀನಾ ಬಿಕ್ಕಟ್ಟಿನ ಮಾರ್ದನಿ ಸಾಧ್ಯತೆ

# ಈ ಬಾರಿ ಕೊರೊನಾ ಸಂಸತ್ ಅಧಿವೇಶನ

ಸಂ.ಕ: 14/9/20

ನವದೆಹಲಿ: ಮುಂಗಾರು ಸಂಸತ್ ಜಂಟಿ ಅಧಿವೇಶನ ಸೋಮವಾರದಿಂದ ಆರಂಭವಾಗಲಿದ್ದು, ವಾಸ್ತವ ಗಡಿ ನಿಯಂತ್ರಣ ರೇಖೆಯಲ್ಲಿ ಉಂಟಾಗಿರುವ ಬಿಕ್ಕಟ್ಟು ಹಾಗೂ ಕೊರೊನಾ ಸೋಂಕು ಹೆಮ್ಮಾರಿಯೇ ಮುಖ್ಯವಾಗಿ ಚರ್ಚಿತವಾಗಲಿದೆ.

ಹದಿನೆಂಟು ದಿನಗಳ ಕಾಲ ನಡೆಯುವ ಅಧಿವೇಶನದಲ್ಲಿ ಗಡಿಬಿಕ್ಕಟ್ಟಿನ ಕುರಿತು ಸದನದಲ್ಲಿ ಹೇಳಿಕೆ ನೀಡಲಾಗುವುದೇ ಎನ್ನುವ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಷಿ, ಮಂಗಳವಾರ ನಾಯಕರ ಸಭೆ ನಡೆಯಲಿದೆ. ಪರಿಸ್ಥಿತಿಯ ಸೂಕ್ಷ್ಮತೆಯನ್ನು ಗಮನದಲ್ಲಿಟ್ಟುಕೊಂಡು ಈ ಕುರಿತು ಹೇಳಿಕೆ ನೀಡಬೇಕೆ ಅಥವಾ ಬೇಡವೇ ಎನ್ನುವುದರ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು ಎಂದಿದ್ದಾರೆ. ಆದರೆ ಯಾವುದೇ ವಿಷಯದ ಕುರಿತು ಸರ್ಕಾರ ಚರ್ಚೆಗೆ ಸಿದ್ಧ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ವಾಸ್ತವ ನಿಯಂತ್ರಣ ರೇಖೆಯಲ್ಲಿ ಉಂಟಾಗಿರುವ ಬಿಕ್ಕಟ್ಟಿನ ಕುರಿತು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ನಿರಂತರವಾಗಿ ಸರ್ಕಾರದ ಮೇಲೆ ವಾಗ್ದಾಳಿ ನಡೆಸುತ್ತಿದ್ದು, ಅದನ್ನು ಕಲಾಪದ ವೇಳೆ ಮುಂದುವರಿಸುವ ಸಾಧ್ಯತೆ ಇದೆ.

ಗೃಹ ಇಲಾಖೆ, ಆರೋಗ್ಯ ಇಲಾಖೆ, ಐಸಿಎಂಆರ್ ಮತ್ತು ಡಿಆರ್‌ಡಿಒಗಳೊಂದಿಗೆ ಸತತ ಚರ್ಚಿಸಿ ಆರೋಗ್ಯಕರ ವಾತಾವರಣದಲ್ಲಿ ಕಲಾಪ ನಡೆಸಲು ಸ್ಪೀಕರ್ ಓಂ ಬಿರ್ಲಾ ಕ್ರಮಗಳನ್ನು ಕೈಗೊಂಡಿದ್ದಾರೆ.

ಅಧಿವೇಶನದ ಮೊದಲು ನಡೆಯುವ ಸಾಂಪ್ರದಾಯಿಕ ಸರ್ವಪಕ್ಷಗಳ ಸಭೆ ಈ ಬಾರಿ ನಡೆಯುವುದಿಲ್ಲ.



- ಐಸಿಎಂಆರ್, ಗೃಹ ಇಲಾಖೆ, ಡಿಆರ್‌ಡಿಒಗಳೊಂದಿಗೆ ಚರ್ಚಿಸಿ ವ್ಯವಸ್ಥೆ
- ಸಾಮಾಜಿಕ ಅಂತರ, ಸ್ಯಾನಿಟೈಸೇಷನ್, ಆನ್‌ಲೈನ್ ದಾಖಲೆಗಳ ಸಿದ್ಧತೆ

ಮೊಟ್ಟ ಮೊದಲ ಬಾರಿಗೆ ರಾಜ್ಯ ಸಭೆ ಮತ್ತು ಲೋಕಸಭೆ ಕಲಾಪಗಳು ಎರಡು ಪ್ರತ್ಯೇಕ ಪಾಳಿಯಲ್ಲಿ ನಡೆಯಲಿವೆ. ರಾಜ್ಯಸಭೆ ಕಲಾಪ ಬೆಳಗ್ಗೆ 9ರಿಂದ 1ರವರೆಗೆ ಹಾಗೂ ಲೋಕಸಭೆ ಕಲಾಪ ಮಧ್ಯಾಹ್ನ 3ರಿಂದ ರಾತ್ರಿ 7ರವರೆಗೆ ನಡೆಯಲಿದೆ. ಸಂಸದರು, ಸಿಬ್ಬಂದಿ, ಅಧಿಕಾರಿಗಳ ಸೇರಿ ಅಧಿವೇಶನದಲ್ಲಿ ಪಾಲ್ಗೊಳ್ಳಬೇಕಾಗಿರುವ 4000 ಜನರಿಗೆ ಕೊರೊನಾ ಸೋಂಕು ಪರೀಕ್ಷೆ ನಡೆಸಿದ್ದು, ಸೋಂಕು ನೆಗೆಟಿವ್ ವರದಿಗಳನ್ನು ಬಂದವರು ಮಾತ್ರ ಪ್ರವೇಶ ಪಡೆಯಲಿದ್ದಾರೆ.

ಸಾಮಾಜಿಕ ಅಂತರವನ್ನು ಗಮನದಲ್ಲಿಟ್ಟುಕೊಂಡು ಸೀಟಿಂಗ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಏರ್‌ಕಂಡೀಷನರ್‌ಗೆ ಆರು ಬಾರಿ ಹೊಸ ಗಾಳಿ ತುಂಬಲಾಗುವುದು.